<u>ಅಸಲು ದಾವಾ ಸಂಖ್ಯೆ: **-89/2020**</u> **ಪಿ.ಡಬ್ಲ್ಯೂ:-1**

ದಿನಾಂಕಃ **17.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಪ್ರತಿವಾದಿ ನನ್ನ ಮತ್ತು ನನ್ನ ಗಂಡನ ಮೇಲೆ ಈ ನ್ಯಾಯಾಲಯದಲ್ಲಿ ಅಸಲು ದಾವಾ ಸಂ. **161/24** ನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯನ್ನು ಪ್ರತಿವಾದಿಯು ನಮ್ಮ ವಿರುದ್ಧ ಸಲ್ಲಿಸಿ ಸದರಿ ದಾವೆಯಲ್ಲಿ ನಾವು ಪ್ರತಿವಾದಿಗೆ ಸೇರಿದ **5** ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದು ಸದರಿ **5** ಗುಂಟೆಯಲ್ಲಿ **200-250** ಅಡಿಕೆ ಗಿಡಗಳು ಪ್ರತಿವಾದಿಗೆ ಸೇರಿದು ಎಂದು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. **2020** ನೇ ಸಾಲಿನಲ್ಲಿ ಈ ದಾವೆಯನ್ನು ಸಲ್ಲಿಸಿದ ಸಮಯದಲ್ಲಿ ಸರ್ವೆ ನಂ. **156/2** ರಲ್ಲಿ ದಾಖಲೆಯ ಪ್ರಕಾರ **2** ಎಕರೆ ಜಮೀನು ಇತ್ತು ಎಂದರೆ ಸಾಕ್ಷಿಯು **2** ಎಕರೆ ಜೊತೆಗೆ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದ ಪತ್ರದಲ್ಲಿ ನಮೂದಾಗಿರುವ ಷಡ್ಯೂಲ್ ಬಗ್ಗೆ ಮಾಹಿತಿ ಇದ್ದೇಯಾ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಾವಾ ಷಡ್ಯೂಲ್ ನಲ್ಲಿ ಸರ್ವೆ ನಂ. **156/2** ರ ಪೂರ್ವ ಭಾಗದ **2** ಎಕರೆ ವಿಸ್ತೀರ್ಣ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು **2** ಎಕರೆ ಜಮೀನಿಗೆ ಸಂಬಂಧಿಸಿದಂತೆ ದಾವೆ ಹಾಕಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನಾವು ಖರೀದಿ ಮಾಡುವ ಪೂರ್ವದಲ್ಲಿ ದಾವಾ ಆಸ್ತಿ ನಂ. **156/2** ರ ಪೈಕಿ ಇತ್ತು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನೀಡಿದ ನಿಪಿ-**17** ರ ದೂರಿನಲ್ಲಿ ಈ ಹಿಂದೆ ಜಮೀನನ್ನು ಹದ್ದುಬಸ್ತು ಮಾಡಿದ್ದು ಪ್ರತಿವಾದಿಯ ಜಮೀನು ನನ್ನ ಜಮೀನಿನಲ್ಲಿ ಬರುತ್ತದೆ ಎಂದು ಸಂಬಂಧಪಟ್ಟ ಭೂ ಮಾಪನ ಅಧಿಕಾರಿಗಳು ಹದ್ದುಬಸ್ತು ಮಾಡಿರುತ್ತಾರೆ ಎಂದು ಮತ್ತು ನನ್ನ ಜಮೀನಿನಲ್ಲಿ ಪ್ರತಿವಾದಿಗೆ ಸೇರಿದ **200-250** ಅಡಿಕೆ ಮರಗಳು ಬರುತ್ತವೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸದರಿ ದೂರಿನಲ್ಲಿ ಸರ್ವೆ ಅಧಿಕಾರಿಗಳು ಅಕ್ಕಪಕ್ಕದವರಿಗೆ ನೋಟೀಸ್ ನೀಡಿದ್ದು ಮತ್ತು ಸದರಿ ನೋಟೀಸ್ ಗೆ

ನಾನು ಸಹಿ ಮಾಡಿರುವುದಿಲ್ಲ ಎಂದು ಮತ್ತು ದೌರ್ಜನ್ಯದಿಂದ ಹದ್ದುಬಸ್ತು ಮಾಡಿರುತ್ತಾರೆ ಎಂದು ಮತ್ತು ಅಕ್ಕಪಕ್ಕದವರು ಸಹಿ ಮಾಡದೇ ಹದ್ದುಬಸ್ತು ಪೂರ್ಣಗೊಂಡಿರುವುದಿಲ್ಲ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸರಿಯಾಗಿ ಪರಿಹಾರ ಕೇಳದೇ ಇದ್ದ ಕಾರಣ ಸದರಿ ದಾವೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.